ಉತ್ತರಾಖಂಡದ ಮಸೂರಿಯಲ್ಲಿ ವಾಸವಾಗಿರುವ ಸಪ್ನಾ ಕೋಟೇಶ್ವರ ಕಟ್ಟಿ ಅವರು ಧಾರವಾಡದವರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಅವರು ಮರಾಠಿ ಸಾಹಿತ್ಯ ಕ್ಷೇತ್ರದ ಪರಿಚಯ ಇರುವವರು. ಮರಾಠಿ ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಾಲಲ್ಲಿ ಬಚ್ಚಲವರೆಗೆ ಬರುವಂತಾಯ್ತು ಥತ್!' ಅಂತ ಆರ್ಭಟ ಮಾಡಿದಾಗ, 'ಇಲ್ಲಾಂದ್ರೆ ನಂಗೆ ಖಂಡಿತ ಕೇಳಿಸಿಲ್ಲಾ. ನಾ ಯಾವತ್ತಾದರೂ ಸುಳ್ಳು ಹೇಳಿದ್ದೀನಾ ನಿಮ್ಮ ಹತ್ತಿರ?' ಅಂತ ದೈನಾಸಪಟ್ಟುಕೊಂಡು ಸಿಟ್ಟು ಇಳಿಯುವವರೆಗೂ ಗಂಡನ ಹಿಂದೆ ಮುಂದೆ ಓಡಾಡಿದ್ದುಂಟು. ಅದನ್ನು ಕಂಡ ಮಾವ, 'ಒಂದು ಸಲಾ ವೈದ್ಯರಿಗೆ ತೋರಿಸಬಾರದೇನೋ ಕೇಶವಾ. ಏನು ಹಾಕ್ಕೊಂಡಿದ್ಲೋ ಕಿವೀಲಿ ಕಡ್ಡಿ ಗಿಡ್ಡಿ ಯಾವನಿಗೆ ಗೊತ್ತು? ಅಲ್ಲೇ ಕೂತು ಕೊಳೆತಿರುತ್ತೆ ಅಷ್ಟೆ' ಅಂತ ಒರಟಾಗಿಯೇ ಹೇಳಿದ್ದು ಕೇಶವನ ತಲೆಗೆ ಹೋಗಿತ್ತು. ಅಂದೇ ಸಂಜೆ ನಾಟಿ ವೈದ್ಯರ ಹತ್ತಿರ ಕರಕೊಂಡು ಹೋಗಿದ್ದ. ಅವರು ಪರೀಕ್ಷೆ ಮಾಡಿ ಕೊಟ್ಟ ಚೂರ್ಣ ಅರೆದು ತಿಂಗಳುಗಟ್ಟಲೆ ಹಚ್ಚಿಕೊಂಡಿದ್ದೇ ಬಂತು ಏನೇನೂ ಗುಣ ಕಂಡಿರಲಿಲ್ಲ. ಇದಕ್ಕೂ ಮುಂದೆ ಸ್ಪೆಷಲಿಸ್ಟ್‌ಗೆ ತೋರಿಸಬೇಕು ಅಂತ ಯಾರಿಗೂ ತೋಚೇ ಇರಲಿಲ್ಲ, 'ಅಪರಿಹಾರಾರ್ಥೇ ನ ಶೋಚಿತುಂ ಅರ್ಹಸಿ' ಅಂತ ಮಾವ ವೇದಾಂತ ಹೇಳಿ ಆಕಾಶ ನೋಡಿಬಿಟ್ಟಾಗಿನಿಂದ 'ಏ ಸರೂ. ಗಂಟಲು ಒಣಗಿದೆ ಚಹಾ ಕಾಸೇ' ಅನ್ನುವ ಕೇಶವನ ಕೂಗೂ 'ಒಂಚೂರು ಮಂಡಿಗೆಣ್ಣೆ ಹಚ್ಚೇ. ಹಾಳು ವಾತದ ನೋವು' ಅನ್ನುವ ಮಾವನವರ ಕೂಗೂ ನಿತ್ಯ ಪಕ್ಕದ ಮನೆಯವರಿಗೂ ಕೇಳತೊಡಗಿದ್ದವು. ಆದರೂ ಮಾವನಿರುವತನಕ ಕೇಶವನಲ್ಲಿ ಏನೋ ಒಂದು ಮಿದುತನವಿತ್ತು. ಅಥವಾ ಬೆಳೆವ ಮಗ ರವಿಯ ಮುಂದೆ ಯಾಕೆ ವಾದಾಟ ಅಂತೂ ಇರಬಹುದು. ರವಿಗೆ ಪುಣೆಯಲ್ಲಿ ಕೆಲಸ ಸಿಕ್ಕಾಗಿತ್ತು. ಮಾವನವರೂ ಒಂದಿನ ರಾತ್ರಿ ಮಲಗಿದವರು ಬೆಳಿಗ್ಗೆ ಎದ್ದಿರಲಿಲ್ಲ. 'ಇನ್ನೇನು ತಾನು ಛಾಪು ಹೊಡೆಯಬೇಕಾಗಿದ್ದ ಎರಡೂ ವ್ಯಕ್ತಿಗಳು ಹೋದರಲ್ಲ' ಅನ್ನಿಸಿರಬೇಕವನಿಗೆ. ಅವನ ಸ್ವರದ ಆರ್ದ್ರತೆ ಏಕದಂ ಮಾಯವಾಗಿತ್ತು, ಮಾತು ಬರೀ ಒದರಾಟಗಳಾಗಿ ಹೋಗಿದ್ದವು. ಬಾಯಿ ತೆರೆದರೆ ತಿರಸ್ಕಾರದ ಬೈಗಳು! 'ಇವಳ ಕಿವುಡಿಂದ ನಂಗೆ ಬದುಕು ಬ್ಯಾಸರಾಗಿ ಹೋತ್ ನೋಡಿ' ಅಂತ ಮನೆಗೆ ಬಂದವರ ಮುಂದೆಲ್ಲ ಹೇಳುತ್ತಿದ್ದ. ಮನೆಯಲ್ಲಿ 'ಚಹಾ' 'ನೀರು' 'ಬ್ಯಾಡಾ' 'ಬೇಕು' ಎಂಬಂಥಾ ಒಂಟಿ ಶಬ್ದಗಳಷ್ಟೇ ಉಳಕೊಂಡಿದ್ದವು.

ಈಗ ಮಗ ಸೊಸೆಗಂತೂ ಯಾವ ಸಂಗತಿಯನ್ನೂ ಹೇಳದಿರಲು ತಮ್ಮ ಕಿವುಡೊಂದು ಸಲೀಸು ಸಬೂಬು ಅಂತ ಭಾವನೆ ಅವರಿಗೆ. ಆದರೆ, ತಕರಾರು ಹೇಳೋದಾದ್ರೂ ಏನಂತ? ಏನು ಕೇಳಿದ್ರೂ 'ನಾವಾಗ್ಲೇ ನಿಂಗೆ ಕೂಗಿ ಹೇಳಿದ್ವು. ಆದರೆ, ನಿಂಗೆ ಕೇಳಲೇ ಇಲ್ಲ' ಅನ್ನೋದೇ ಸ್ಟ್ಯಾಂಡರ್ಡ್ ಜವಾಬು. ಆಗೆಲ್ಲ ಅದೇನು ನಿಜವೋ ಸುಳ್ಳೋ ಅಂತ ತಿಳೀದೇ ಮೈಕೈ ಪರಚಿಕೊಳ್ಳುವಷ್ಟು ಸಂತಾಪ ಇವರಿಗೆ. ಹಾಗೆಂದೇ ಸುಮ್ಮನಾಗಿಬಿಡ್ತಾರವರು. ಒಮ್ಮೆ ಮಾತ್ರ ರಸರಸೀತ ಆಪೂಸು ಹಣ್ಣುಗಳನ್ನು ಮುಂದಿಟ್ಟುಕೊಂಡು ಮಗ, ಸೊಸೆ ಇಬ್ಬರೇ ತಿನ್ನುವುದು ಕಂಡಾಗ ತಡೆಯಲಾಗದೆ ಆರ್ಭಟಿಸಿದ್ದರು: 'ಅಲ್ಲೋ ರವಿ ಹಣ್ಣು ಹಂಚಿ ತಿನ್ನಬೇಕು ಅನ್ನೋ ಬುದ್ಧಿನೂ ಇಲ್ದೇ ಹೋಯ್ತಲ್ಲೋ ನಿನಗೆ. ಮನೇಲಿ ನಾನೂ ಒಬ್ಬಳು ಮನುಷ್ಯಳೂ ಅಂತಿದ್ದೇನೆ ಅನ್ನೋದೇ ಮರ್ತು ಹೋಯ್ತಾ? ನೀನೂ ತಿಂತೀಯೇನಮ್ಮಾ? ಅಂತ ಒಂದು ಮಾತು ಕೇಳಬೇಕೆನ್ನಿಸಲಿಲ್ಲ ನಿಂಗೆ?' ಎಂದು ಕೇಳಿಬಿಟ್ಟಿದ್ದರು.

ರವಿಯೂ ಜೋರಾಗಿ ಹೇಳಿದ್ದ 'ಆಗಲೇ ಕೂಗಿ ಕೇಳಿದೆನಮ್ಮ. ನೀ ಬೇಕು ಬೇಡ ಎಂಥಾದೂ ಹೇಳಲೇ ಇಲ್ಲ. ಮತ್ತೇನು ಮಾಡ್ಬೇಕು ಹೇಳು?' ಯಾಕೋ ಅಸಹಾಯಕತೆಯಿಂದ ಸರಯೂ ಕಣ್ಣಲ್ಲಿ ನೀರು ಬಂದಿತ್ತು. 'ಥೂ ಒಂದು ಹಣ್ಣಿಗೆ ಆಸೆಪಟ್ಟುಕೊಂಡು ಇವರ ಹತ್ತಿರ ಕೇಳಲು ಹೋದೆನಲ್ಲ?' ಅಂತ. ಅವ ಮರುದಿನವೇ ಹಿಯರಿಂಗ ಏಡ್ ಕೊಡಿಸಲು ಕರೆದೊಯ್ದಿದ್ದನೇನೋ ನಿಜ, ಆದರೆ 85 ಪರ್ಸೆಂಟ್ ಕೆಟ್ಟು ಹೋಗಿರುವ ಕಿವಿ ಪರದೆಗೆ ಅದರಿಂದ ಏನೂ ಪ್ರಯೋಜನವಿಲ್ಲ ಅಂತ ಡಾಕ್ಟರ್ ಹೇಳಿದ ಮೇಲೆ ಸುಮ್ಮನಾಗಿಬಿಟ್ಟಿದ್ದ.